SN – 085

-14-

III Sem. B.A./B.H.M. Examination, Nov./Dec. 2013
(Fresher + Repeaters) (2012-2013 and Onwards)
ಕನ್ನಡ ಭಾಷಾ ಪತ್ರಿಕೆ - III
ಸಾಹಿತ್ಯ ಸಲ್ಲಾಪ - ೨

Time : 3 Hours Max. Marks : 100

I. ಈ ಪದ್ಯದ ಭಾವಾರ್ಥ ಬರೆಯಿರಿ : **(1×6=6)**

1) ಖಂಡಿತ ಮೆನಿಪ್ಪ ವರಮಹಿ
ಮಂಡಲಧವಳಾತಪತ್ರ ಸಂಪದಮೆನಗೇ
ಭಂಡಮದನೊಲ್ಲೆನೊಲ್ಲೆನ
ಖಂಡಿತಮಾಭಿಮಾನಮದನೆ ಬಲ್ವಿಡಿವಿಡಿವೆಂ

ST. CLARET COLLEGE LIBRARY

2) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : **(2×3=6)**
ಬಸವಣ್ಣ, ತಸ್ಕರ, ಜನ ಮರುಳೊ ಜಾತ್ರೆ ಮರುಳೊ.

II. 1) ಇವುಗಳಲ್ಲಿ **ಐದು** ಪದಗಳಿಗೆ ಮೂಲ ರೂಪ ಬರೆಯಿರಿ : **(5×1=5)**
ಕಬ್ಬ, ಕಂಬ, ಇಸ್ಕೂಲು, ಸಿಂಗಾರ, ಕಪ್ಪುರ, ಮುಕುತಿ, ದೇಸಾಂತ್ರ.

2) ಇವುಗಳಲ್ಲಿ **ಐದು** ಪದಗಳಿಗೆ ಅರ್ಥ ಬರೆಯಿರಿ : **(5×1=5)**
ಅಣುಗ, ಬಳ್ಳ, ಗವುಳಿ, ಅಟ್ಟಕ್ಕೇರಿಸು, ಕಂಬಿಕೀಳು, ವಟಗುಟ್ಟು, ಹೊಂಚುಹಾಕು.

3) ಇವುಗಳಲ್ಲಿ **ಐದು** ಪದಗಳನ್ನು ಬಿಡಿಸಿ ಬರೆಯಿರಿ : **(5×1=5)**
ರಥೋತ್ಸವ, ಅತ್ಯುತ್ತಮ, ಸರ್ವಾಸ್ತ್ರ, ಬೆಳ್ಗೊಡೆ, ಅಂಗೈ, ಬೆಟ್ಟದಾವರೆ, ಗಿಡಮರಬಳ್ಳಿ.

4) ಕೆಳಗೆ ಕೊಟ್ಟಿರುವ ಉಪಮೆ, ರೂಪಕಗಳನ್ನು ಬಳಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿ : **(5×1=5)**
ಸೀತೆಯಂತೆ ಪತಿವ್ರತೆ, ದುರ್ಯೋಧನನಂತೆ ಛಲವುಳ್ಳವ, ಹರಿಶ್ಚಂದ್ರನಂತೆ ಸತ್ಯವಂತ, ಪಶುಪತಿ, ಮೀನಾಕ್ಷಿ.

III. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(4×5=20)**

1) ದುರ್ಯೋಧನ ಮತ್ತು ಭೀಷ್ಮರ ನಡುವೆ ನಡೆದ ಸಂವಾದವನ್ನು ಕುರಿತು ಬರೆಯಿರಿ.
2) ಸದ್ಭಕ್ತರ ಸಂಗದಿಂದಾಗುವ ಪ್ರಯೋಜನಗಳನ್ನು ಬಸವಣ್ಣನವರು ಹೇಗೆ ವಿಶದಪಡಿಸಿದ್ದಾರೆ ?
3) ಹಸಿವು ಮತ್ತು ಅಸಹಾಯಕತೆಗಳು 'ಕಾಣಿ' ಪಾತ್ರದ ಮೂಲಕ ಚಿತ್ರಿತವಾದ ಬಗೆ ಹೇಗೆ ?
4) ಭೂಮಿಯ ಉಷ್ಣಾಂಶ ಹೆಚ್ಚಾಗಲು ಕಾರಣವೇನು ?
5) ಜೋಯಿಸನ ಕುತಂತ್ರ ಮತ್ತು ಶೋಷಣೆಯ ಮುಖಗಳನ್ನು ಚಿತ್ರಿಸಿ.
6) ಸಿದ್ಧಾರ್ಥನ ಹೆಂಡತಿ ಮಗುವನ್ನು ನೋಡಿದಾಗ ಉಂಟಾದ ಭಾವನೆಗಳೇನು ?

P.T.O.

IV. ಇವುಗಳಿಗೆ ವಿವರವಾಗಿ ಉತ್ತರಿಸಿ : (4×12=48)

1) ಭೀಷ್ಮಾಚಾರ್ಯರ ವ್ಯಕ್ತಿತ್ವ ಮತ್ತು ದುರ್ಯೋಧನನ ಸ್ವಾಭಿಮಾನ ಎಂತಹದು ? ಚರ್ಚಿಸಿ.

**ಅಥವಾ**

ಗೋರಿ ಜಾಗದಲ್ಲಿ ಗುಡಿ ನಿರ್ಮಾಣವಾದ ಬಗೆಯನ್ನು 'ಕತ್ತೆ ಮತ್ತು ಧರ್ಮ' ಕವಿತೆಯನ್ನಾಧರಿಸಿ ವಿಶ್ಲೇಷಿಸಿ.

2) ಪುರುಷ ಪ್ರಧಾನ ಸಮಾಜದ ಶೋಷಣೆಯ ವಿವಿಧ ಮುಖಗಳು 'ಕೊನೆಯ ಗಿರಾಕಿ' ಕಥೆಯಲ್ಲಿ ಅನಾವರಣಗೊಂಡ ಬಗೆಯನ್ನು ಚರ್ಚಿಸಿ.

**ಅಥವಾ**

ಪೋರಸನ ವ್ಯಕ್ತಿತ್ವ ಅಲೆಕ್ಸಾಂಡರನನ್ನು ಪರಿವರ್ತಿಸಿದ ಬಗೆಯನ್ನು 'ಗೆಲುವು' ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.

3) 'ಅದೃಷ್ಟ ನಂಬಿ ಬದುಕುವುದಕ್ಕಿಂತ ಪ್ರಾಮಾಣಿಕ ಪ್ರಯತ್ನದಿಂದಲೇ ಯಶಸ್ಸು' ಎಂಬುದನ್ನು 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಲೇಖನವನ್ನಾಧರಿಸಿ ಚರ್ಚಿಸಿ.

**ಅಥವಾ**

ಹವಾಮಾನದ ವೈಪರೀತ್ಯದಿಂದ ಉಂಟಾಗುವ ದುಷ್ಪರಿಣಾಮಗಳನ್ನು ವಿವರಿಸಿ.

4) ಸಿದ್ಧಾರ್ಥ ಅರಮನೆ ಅಂತಃಪುರಕ್ಕೆ ವಿದಾಯ ಹೇಳಿದ ಪ್ರಸಂಗವನ್ನು ವಿಶ್ಲೇಷಿಸಿ.

**ಅಥವಾ**

'ಮಹಾರಾತ್ರಿ' ನಾಟಕದಲ್ಲಿ ಬರುವ ಗಂಧರ್ವ, ಚೆನ್ನರ ಪಾತ್ರಗಳನ್ನು ಪರಿಚಯಿಸಿ.

---